ಸುಳ್ಯ ಪಟ್ಟಣ ಒಳಚರಂಡಿ ಯೋಜನೆ ಬಗ್ಗೆ

159 ಶ್ರೀ ಬಿ. ಹುರಪ್ಪ (ಸುಳ್ಯ)-- ಮಾನ್ಯ ನಗರಾಭಿವೃದ್ಧಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ ?

ಅ) ಸುಳ್ಯ ನಗರಕ್ಕೆ ಒಳಚರಂಡಿ ವ್ಯವಸ್ಥೆ ಮಾಡಲು ಸರಕಾರದ ಮುಂದೆ ಸಲಹೆ ಏನಾದರು ಇದೆಯೇ ;

ಆ) ಹಾಗಿಲ್ಲದಿದ್ದಲ್ಲಿ ಈ ಬಗೆ ಸರಕಾರದವರು ಏನು ಕ್ರಮ ಕೈಗೊಳ್ಳುವರು ?

ಶ್ರೀ ಎಂ. ಚಂದ್ರಶೇಖರ್.--ನಗರಾಭಿವೃದ್ಧಿ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಂತ್ರಿಗಳು.--

ಅ) ಇಲ್ಲ

ಆ) ನೀರು ಸರಬರಾಜು ಕೈಪಿಡಿಯ ಪ್ರಕಾರ ದಿನಂಪ್ರತಿ ತಲಾ ಸುಮಾರು 25-30 ಗ್ಯಾಲನ್ ನೀರು ಸರಬರಾಜು ಇದ್ದ ಪಕ್ಷದಲ್ಲಿ ಮಾತ್ರ ಒಳಚರಂಡಿ ಯೋಜನೆಯನ್ನು ತೆಗೆದುಕೊಳ್ಳಬಹುದು. ಆದರೆ ಈಗ ಸುಳ್ಯ ಪಟ್ಟಣಕ್ಕೆ ದಿನಂಪ್ರತಿ ತಲಾ 10 ಗ್ಯಾಲನ್ ನೀರು ಮಾತ್ರ ಒದಗಿಸಲಾಗುತ್ತಿದೆ. ಆದುದರಿಂದ ನೀರು ಸರಬರಾಜು ಅಭಿವೃದ್ಧಿ ಯೋಜನೆ ಕಾರ್ಯಗತವಾದ ನಂತರ ಒಳಚರಂಡಿ ವ್ಯವಸ್ಥೆ ಯೋಜನೆಯನ್ನು ರೂಪಿಸಲಾಗುವುದು.

ಶ್ರೀ ಬಿ. ಹುರ್ರಪ್ಪ.—ಸುಳ್ಯ ಕ್ಷೇತ್ರದಲ್ಲಿ ಸರಬರಾಜು ಆಗೂವ ನೀರಿನಲ್ಲಿ ಮಲಮೂತ್ರ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್.—ಆ ತರಹ ದೂರುಗಳು ಬಂದಿಲ್ಲ ಸರ್ಕಾರದ ವತಿಯಿಂದ ಹೇಳುವುದಾದರೆ, ಶುದ್ಧೀಕರಣವಾದ ನೀರನ್ನು ನಾವು ಜನರಿಗೆ ಕೊಡುತ್ತಿದ್ದೇವೆ. ಇದಕ್ಕಾಗಿ 1.22 ಲಕ್ಷ ರೂ ಮಂಜೂರು ಮಾಡಲಾಗಿದ್ದು ಶುದ್ಧೀಕರಣ ಕಾರ್ಯ ನಡೆಯುತ್ತಿದೆ. ಒಟ್ಟಿನಲ್ಲಿ ನೀರಿನ ಅಶುದ್ಧೀಕರಣದ ಬಗ್ಗೆ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿಲ್ಲ

ಶ್ರೀ ಕೆ. ರಾಮಭಟ್.—ಸ್ವಾಮಿ, ಅಲ್ಲಿ ಬರತಕ್ಕ ನೀರನ್ನು ಸ್ಯಾಂಪಲ್‌ಗೆ ಕಳಿಸಿದ್ದೇನೆ. ಆದು ಕುಡಿಯುವುದಕ್ಕೆ ಅಯೋಗ್ಯ ನೀರು ಎಂದು ಅಲ್ಲಿಂದ ರಿಪೋರ್ಟ್ ಬಂದಿದೆ. ಆದರೆ ವಿಧಿಯಿಲ್ಲದೆ ಜನರು ಆದೇ ನೀರನ್ನು ಕುಡಿಯುತ್ತಿದ್ದಾರೆ. ಇದರ ಬಗ್ಗೆ ತಾವು ಪರಿಶೀಲಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಇದನ್ನು ನಾನು ಪರಿಶೀಲಿಸುತ್ತೇನೆ.

ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಹಳ್ಳಿಗಳ ವಿದ್ಯುದ್ದೀಕರಣ

160 ಶ್ರೀ ರಾಮಚಂದ್ರ ವೀರಪ್ಪ (ಹುಲಸೂರು).—ಮಾನ್ಯ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ .--

ಅ) ಬೀದರ್ ಜಿಲ್ಲೆ ಹುಲಸೂರು ವಿಧಾನ ಸಭಾ ಕ್ಷೇತ್ರದ ಎಷ್ಟು ಹಳ್ಳಿಗಳನ್ನು ಇಲ್ಲಿಯವರೆಗೆ ವಿದ್ಯುದ್ದೀಕರಿಸಲಾಗಿದೆ;

ಆ) ಈ ಕ್ಷೇತ್ರದ ಎಲ್ಲಾ ಹಳ್ಳಿಗಳನ್ನು ವಿದ್ಯುದ್ದೀಕರಿಸಲು ಎಷ್ಟು ಕಾಲ ಬೇಕಾಗುವುದು ?

ಶ್ರೀ ಜೆ. ಎಚ್. ಪಟೀಲ್ (ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು).—(ಅ) ಜನಗಣತಿಯಾಗಿ ಹಾಗೂ ಇನಸಿತ 146 ಹಳ್ಳಿಗಳು.

ಆ) ಉಳಿದ ಮುಖೇಡ ಎಂಬ ಒಂದು ಹಳ್ಳಿಯ ವಿದ್ಯುದ್ದೀಕರಣವು ಮಹಾರಾಷ್ಟ್ರ ವಿದ್ಯುತ್ ಮಂಡಳಿಯಿಂದ ವಿದ್ಯುತ್ ಸರಬರಾಜು ಪಡೆದು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜೆ. ಹೆಚ್. ಪಟೀಲ್.--ಮಾನ್ಯ ಉಪಾಧ್ಯಕ್ಷರೆ, ಬೀದರ್ ಜಿಲ್ಲೆಯ ಹುಣಸೂರು ವಿಧಾನಸಭಾ ಕ್ಷೇತ್ರದ ಎಷ್ಟು ಹಳ್ಳಿಗಳಿಗೆ ಇದುವರೆಗೆ ವಿದ್ಯುದ್ದೀಕರಿಸಲಾಗಿದೆ, ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿರುತ್ತಾರೆ. ಅದಕ್ಕೆ ಉತ್ತರ ಈ ರೀತಿ ಇದೆ. ಒಟ್ಟು 147 ಗ್ರಾಮಗಳ ಪೈಕಿ 146 ಗ್ರಾಮಗಳಿಗೆ ವಿದ್ಯುದ್ದೀಕರಣಗೊಳಿಸಲಾಗಿದೆ. ಇನ್ನುಳಿದ "ಮುಖೇಡ" ಎನ್ನುವ ಒಂದು ಗ್ರಾಮಕ್ಕೆ ವಿದ್ಯುದ್ದೀಕರಣವನ್ನು ಮಾಡಿಲ್ಲ. ಕಾರಣ ಈ ಗ್ರಾಮ ಮಹಾರಾಷ್ಟ್ರದ ಕಡೆಗೆ ಹೆಚ್ಚಿನ ಭಾಗ ಹೋಗಿದೆ. ಇದಕ್ಕೆ ವಿದ್ಯುದ್ದೀಕರಣ ಮಾಡಬೇಕಾದರೆ ನಮ್ಮ ಕರ್ನಾಟಕದ ಕಡೆಯಿಂದ 11 ಕಿಲೋಮೀಟರ್ ದೂರ ಹಾಕಬೇಕು ಮಹಾರಾಷ್ಟ್ರದ ಕಡೆಯಿಂದ ಆದರೆ ಕೇವಲ 1 ½ ಕಿಲೋಮೀಟರ್ ದೂರ ಹಾಕಬೇಕಾಗುತ್ತದೆ. ಆದ್ದರಿಂದ ಈ ವಿಚಾರವನ್ನು ಮಹಾರಾಷ್ಟ್ರ ಸರ್ಕಾರದವರಿಗೆ ತಿಳಿಸಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಈ ವಿಚಾರದಲ್ಲಿ ಯಾವಾಗ ಪತ್ರವ್ಯವಹಾರ ಮಾಡಿದ್ದೀರಿ ? ಅಲ್ಲಿ ಹರಿಜನರ 50 ತಾಂಡಗಳಿವೆ. ಆದ್ದರಿಂದ ಅಲ್ಲಿರತಕ್ಕ ಜನರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಲು ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜೆ. ಹೆಚ್. ಪಟೇಲ್.—ಮುಖೇಡ್ ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಲು ಮಹಾರಾಷ್ಟ್ರ ಸರ್ಕಾರದವರಿಗೆ ಒಪ್ಪಿಸಬೇಕಾಗಿದೆ. ಆ ಕೆಲಸವನ್ನು ನಾವು ಮಾಡುತ್ತೇವೆ. ಆದರೆ ತಾವು ಹೇಳಿದಂತೆ ಅಲ್ಲಿ ಹರಿಜನ ತಾಂಡಗಳು ಯಾವುದೂ ಇಲ್ಲವೆಂದು ತಿಳಿದುಬಂದಿದೆ.

ಶಿಡ್ಲಘಟ್ಟ ತಾಲ್ಲೂಕಿನ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು

161 ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಅಬಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಇರುವ ಹಳ್ಳಿಗಳ ಸಂಖ್ಯೆ ಎಷ್ಟು ;

(ಆ) ಆ ಪೈಕಿ ವಿದ್ಯುಚ್ಛಕ್ತಿ ಇಲ್ಲದೇ ಇರುವ ಹಳ್ಳಿಗಳಿಗೆ ಮಂಜೂರಾತಿ ದೊರಕಿರುವುದು ಯಾವ ಸಾಲಿನಲ್ಲಿ ;

(ಇ) ಹಾಗಿದ್ದಲ್ಲಿ ಕೆಲಸ ವಿಳಂಬವಾಗಲು ಕಾರಣಗಳೇನು ?

(ಈ) ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಒದಗಿಸಲು ಕೋರಿ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬಕಾರಿ ಸಚಿವರು).— ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ತಮ್ಮ ಮೊದಲನೇ ಪ್ರಶ್ನೆಯಲ್ಲಿ "ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಇಲ್ಲದೇ ಇರುವ ಹಳ್ಳಿಗಳ ಸಂಖ್ಯೆ ಎಷ್ಟು" ಎಂದು ಕೇಳಿದ್ದಾರೆ. ಇದಕ್ಕೆ ಉತ್ತರ 15 ಜನಗಣತಿ ಯಾದ ಗ್ರಾಮಗಳಿಗೆ ಇನ್ನೂ ವಿದ್ಯುಚ್ಛಕ್ತಿ ಸರಬರಾಜಾಗಿಲ್ಲ. ಇನ್ನು ಎರಡನೆಯದಾಗಿ "ಆ ಪೈಕಿ ವಿದ್ಯುಚ್ಛಕ್ತಿ ಇಲ್ಲದೇ ಇರುವ ಹಳ್ಳಿಗಳಿಗೆ ಮಂಜೂರಾತಿ ದೊರಕಿರುವುದು ಯಾವ ಸಾಲಿನಲ್ಲಿ" ಎಂದು ಕೇಳಿದ್ದಾರೆ. ಆದಕ್ಕೆ ಉತ್ತರ ಈ ರೀತಿ ಇದೆ. 1981 ರಲ್ಲಿ 11 ಗ್ರಾಮಗಳಿಗೂ, 1983 ರಲ್ಲಿ 4 ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸರಬರಾಜನ್ನು ಗ್ರಾಮೀಣ ವಿದ್ಯುದ್ದೀಕರಣ ನಿಗಮದ ಯೋಜನೆಯಲ್ಲಿ ಮಂಜೂರು ಮಾಡ ಲಾಗಿದೆ. ಈ 15 ಗ್ರಾಮಗಳಿಗೂ ಮುಂದಿನ 1-2 ವರ್ಷಗಳಲ್ಲಿ ವಿದ್ಯುದ್ದೀಕರಣ ಕೆಲಸವನ್ನು ಮಾಡಿ ಮುಗಿಸುತ್ತೇವೆ.

ಶ್ರೀ ವಿ. ಮುನಿಯಪ್ಪ.—ಸ್ವಾಮಿ, 1981 ನೇ ಸಾಲಿನಲ್ಲಿ 11 ಗ್ರಾಮ ಮತ್ತು 1983ನೇ ಸಾಲಿನಲ್ಲಿ 4 ಗ್ರಾಮಗಳಿಗೆ ಮಂಜೂರಾತಿ ನೀಡಲಾಗಿದೆ ಎಂದು ಹೇಳುತ್ತಿದ್ದೀರಿ. ಆದರೆ ಇದುವರೆಗೂ ಈ ಕೆಲಸ ಆಗಿಲ್ಲ. ಈ ಕೆಲಸ ಏತಕ್ಕೆ ನಿಧಾನವಾಗಿದೆ ಎಂದು ವಿದ್ಯುಚ್ಛಕ್ತಿ ಮಂಡಲಿಯವರನ್ನು ಕೇಳಿದರೆ "ಇದಕ್ಕೆ ಬೇಕಾದಂಥ ವಿದ್ಯುತ್ ಸಲಕರಣೆಗಳು ನಮಗೆ ಇದುವರೆಗೂ ಬಂದಿಲ್ಲ" ಎಂದು ಹೇಳಿಕೊಂಡು ಬರುತ್ತಿದ್ದಾರೆ, ಸುಮಾರು 12 ವರ್ಷದಿಂದ ನಿಂತಿರತಕ್ಕ ಈ 11 ಹಳ್ಳಿಗಳ ವಿದ್ಯುದ್ದೀಕರಣ ಕೆಲಸವನ್ನು ಆದಷ್ಟು ತೀವ್ರವಾಗಿ ಮಾಡಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್ :—1981 ರಲ್ಲಿ ತೆಗೆದುಕೊಂಡಿರತಕ್ಕ 11 ಕಾರ್ಯಗಳನ್ನೂ ಮತ್ತು 83 ರಲ್ಲಿ ತೆಗೆದುಕೊಂಡಿರತಕ್ಕ 4 ಕಾರ್ಯಗಳನ್ನೂ ಆದಷ್ಟು ತೀವ್ರವಾಗಿ ಪೂರೈಸುತ್ತೇವೆ. ಈಗ ಏನು ವಿದ್ಯುತ್ ಸಲಕರಣೆಗಳಿಲ್ಲವೆಂದು ಹೇಳುತ್ತಿದ್ದೀರಿ ಅದನ್ನೂ ಕೂಡ ಗಮನಕ್ಕೆ ತೆಗೆದುಕೊಂಡು ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ತಮ್ಮ ಕೊನೆಯ ಪ್ರಶ್ನೆಯಲ್ಲಿ ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಒದಗಿಸಲು ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ? ಎಂದು ಕೇಳಿದ್ದೀರಿ, ಆದಕ್ಕೆ ಉತ್ತರ ಈ ರೀತಿ ಇದೆ. ನಿರಾವರಿ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಸಲುವಾಗಿ 446 ಅರ್ಜಿಗಳು ಬಂದಿದ್ದವು. ಅವುಗಳ ಪೈಕಿ 361 ಪಂಪ್ ಸೆಟ್ಟುಗಳಿಗೆ ಈಗಾಗಲೇ ವಿದ್ಯುಚ್ಛಕ್ತಿ ಯನ್ನು ಸರಬರಾಜು ಮಾಡಿದ್ದೇವೆ.

ಶ್ರೀ ಸಿ. ಬೈರೇಗೌಡ —ಸ್ವಾಮಿ, ತಾವು ಹೇಳಿದ 15 ಗ್ರಾಮಗಳ ಪೈಕಿ ಹ್ಯಾಮ್ಲೆಟ್ ಗ್ರಾಮಗಳೆಷ್ಟು ಮತ್ತು ಮುಖ್ಯ ಗ್ರಾಮಗಳೆಷ್ಟು ಎಂಬುದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಇದಕ್ಕೆ ಸಂಬಂಧಪಟ್ಟ ಮಾಹಿತಿ ನನ್ನ ಹತ್ತಿರ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಒಪ್ಪಿಸುತ್ತೇನೆ.